'ನೀವು' ಎಂದು ಹೇಳಿದರೆ ಆಗುವುದಿಲ್ಲ. ಅದೆಲ್ಲಾ ನಿಮಗೆ. ನಾನು ಜಾತಿಭ್ರಷ್ಟ. ನನಗೆ ಯಾರೂ ಯಾವ ರೀತಿಯ ಗೌರವ ಕೊಡಬೇಕಾದ ಅಗತ್ಯವೂ ಇಲ್ಲ. ಸುಮ್ಮನೆ ನನ್ನ ಕತೆಯನ್ನು ಕೇಳಿ. ಹೇಗೂ ಕೇಳಿದ್ದೀರಿ, ಹೇಳಲು ನನಗೆ ಅಡ್ಡಿಯಿಲ್ಲ." ಗಳಿಗೆ ಸುಮ್ಮನಾದೆ.

## 2

ದೂರ್ವಾಸಪುರದ ಹಿಂದೆ ಅವನ ಮನೆ. ಅವನು ಮನೆಗೆ ಬರುವುದು ಮತ್ತು ಹೋಗುವುದು ಯಾರಿಗೂ ಅಷ್ಟು ತಿಳಿಯುವುದಿಲ್ಲ. ಅವನಿಗೆ ಅಗ್ರಹಾರದ ಜನರ ಜೊತೆಗೆ ಸಂಬಂಧವಿಲ್ಲ. ಅಷ್ಟೇ ಅಲ್ಲ, ಅನಂತಮೂರ್ತಿಯವರು 'ಸಂಸ್ಕಾರ' ಕಾದಂಬರಿಯನ್ನು ಬರೆದ ಮೇಲಂತೂ ಅವನು ಯಾರಿಗೂ ಬೇಡದ ವ್ಯಕ್ತಿಯಾಗಿದ್ದ. ಅವರ ಮಟ್ಟಿಗೆ ಅವನು ದಿವಂಗತನಾಗಿದ್ದ. "ಆದರೆ, ನಾನು ಸತ್ತಿದ್ದೇನೆ ಇಲ್ಲಾ ನಾನು ಜೀವನವನ್ನು ನಡೆಸುತ್ತಿದ್ದೇನೆ, ನಾನು ಚಂದ್ರಿಯ ಜೊತೆಗೆ ಇದ್ದೇನೆ ಎನ್ನುವುದನ್ನು ಅಗ್ರಹಾರದವರಿಗೆ ಹೇಳಬೇಕಾದ ಅಗತ್ಯ ಇಲ್ಲ." ಎಂದು ಭಾವಿಸಿದವನಿಗೆ ಉಳಿದವರ ಬಗ್ಗೆ ಯಾವ ಆಸಕ್ತಿಯೂ ಇರಲಿಲ್ಲ. ಕಾಡಿನ ಮಧ್ಯೆ ಒಂದು ಸಣ್ಣ ಮನೆಯನ್ನು ಕಟ್ಟಿಕೊಂಡಿದ್ದಾನೆ. ಯಾವಾಗ ತನ್ನ ಹೆಂಡತಿಯು ಓಡಿ ಹೋದಳೋ ಅನಂತರ ಜೀವನ ಎನ್ನುವುದರ ಬಗ್ಗೆಯೇ ಒಂದು ತಿರಸ್ಕಾರ ಬಂದುದು ಸತ್ಯ. ಅಗ್ರಹಾರ ಬೇಡ ಎಂದು ಅನಿಸಿತ್ತು. ಆಗಲೇ ತನ್ನ ಜನಿವಾರವನ್ನು ಎಲ್ಲಾ ಬ್ರಾಹ್ಮಣರ ಎದುರು ಕಡಿದು ಬಿಸಾಕಿ, 'ನನ್ನ ಹೆಂಡತಿ ಓಡಿ ಹೋದರೆ ನಿಮಗೇನು? ನೀವು ಏನು ಬೇಕಾದರೂ ಮಾತಾಡಿ, ನನಗೂ ನಿಮಗೂ ಯಾವ ಸಂಬಂಧವೂ ಇಲ್ಲ' ಎಂದು ಹೇಳಿಯೇ ಬಂದಿದ್ದ. ಅವನಿಗೆ ಯಕ್ಷಗಾನ ಗೊತ್ತಿಲ್ಲ. ಆದರೂ ಅವನು ಮೇಳ ಸೇರಿಕೊಂಡು ಅದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನ ಮಾಡಿದ್ದು ನಿಜ. ಚೌಕಿಯಲ್ಲಿ ಹೆಚ್ಚು ಮಾತಾಡುವುದಿಲ್ಲ. ಗೊತ್ತಿರುವ ಜ್ಞಾನದ ಮೂಲಕ ಯಕ್ಷಗಾನದ ಅರ್ಥ ಹೇಳುತ್ತಾನೆ. ರಂಗಸ್ಥಳಕ್ಕೆ ಸುತ್ತು ಬಂತು ಅರ್ಥ ಹೇಳುತ್ತಾನೆ. ಅದು ಅವನಿಗೆ ಹೊಟ್ಟೆ ಪಾಡು. ಮಳೆಗಾಲದಲ್ಲಿ ಮಾತ್ರವೇ ಮನೆಯಲ್ಲಿ ಇರುತ್ತಾನೆ. ಮಧ್ಯೆ ಬಂದರೆ ಬಂದ, ಇಲ್ಲವಾದರೆ ಇಲ್ಲ. ಕೇಳುವುದಿಕ್ಕೆ ಇಲ್ಲದ ಮೇಲೆ ಅದನ್ನು ತಾನು ಯೋಚಿಸಬೇಕಾಗಿಲ್ಲ. ಒಂಟಿತನ ಮಾತ್ರವೇ ಕಾಡುತ್ತದೆ. ಅದನ್ನು ಮೀರಲು ತನಗೆ ಸಾಧ್ಯವಿಲ್ಲ, ಮನೆಯಲ್ಲಿ ಇನ್ನೊಂದು ಜೀವ ಎನ್ನುವುದು ಇದ್ದರೆ ಈ ಸಮಸ್ಯೆ ಬರುವುದಿಲ್ಲ. ಒಮ್ಮೊಮ್ಮೆ ಓಡಿಹೋದ ಹೆಂಡತಿಯ ನೆನಪು ಬರುತ್ತದೆ. ಅವಳ ಮೇಲೆ ಸಿಟ್ಟು ಬರುತ್ತದೆ. ಆದರೆ, ತಾನು ಸರಿಯಿಲ್ಲವೇನೋ ಎನ್ನುವ ಅನಿಸಿಕೆ ಬರುತ್ತದೆ. ಅದು ನಿಜ. ನಾಗರಾಜ ಶಾಸ್ತ್ರಿಯ ಜೊತೆಗೆ ಹೋದಳು. ಅವನು ಬಸ್ಸಿನ ಕಂಡೆಕ್ಟರ್ ಅಂತೆ. ಅದನ್ನೇ ತಿರುಗಿಸಿ ಬೇರೆ ಬೇರೆ ಥರ ಬರೆದರು. ಅದೇನು ನನ್ನ ಮೈಗೆ ಅಂಟಿಕೊಂಡಿಲ್ಲ. ಕೆಲವರು ಮಾತಾಡಿದರು. ಅವರ ಗಂಟಲು ಒಣಗುವ ತನಕ ಮಾತಾಡಲಿ, ಅದರಿಂದ ನನಗೆ ಏನೂ ಆಗುವುದಿಲ್ಲ. ಮತ್ತೊಮ್ಮೆ ತಾನೇ ತನ್ನ ಹೆಂಡತಿಗೆ ಅನ್ಯಾಯ ಮಾಡಿದೆ ಎಂದೂ ಭಾವಿಸಿಕೊಳ್ಳುತ್ತಾನೆ. ಅವನು ಈ ವಿಷಯದ ಕುರಿತು ಅನೇಕ ಬಾರಿ ಯೋಚನೆ ಮಾಡಿದ್ದಾನೆ. ಲಲಿತ ನನಗೆ ಏನೂ ಅನ್ಯಾಯ ಮಾಡಲಿಲ್ಲ. ಆದರೆ, ನಾನು ಮಾಡಿರಬೇಕು. ತನ್ನ ಅವಳ ಮದುವೆಯಾದಾಗ ಅವಳ ವಯಸ್ಸು ಇಪ್ಪತ್ತು. ತನ್ನದು ಇಪ್ಪತ್ತೈದು. ಒಂದೇ ಒಂದು ವಾರ ಮಾತ್ರ ಚೆನ್ನಾಗಿದ್ದು, ಅನಂತರ ಅಂತರವೂ ಶುರುವಾಯಿತು. ತೀರ್ಥಹಳ್ಳಿಗೆ ಬಂದ ದಿನವೇ ಲಲಿತ ನಾರಣಪ್ಪನನ್ನು ದೂರ ಇಡಲು ಪ್ರಯತ್ನ ಮಾಡಿದಳು. ಲಲಿತೆ ನಿಜವಾಗಿಯೂ ಸುಂದರಿ. ಕೇದಿಗೆಯ ಮೈಬಣ್ಣ. ನಕ್ಕರೆ ಅವಳ ಕೆನ್ನೆಯಲ್ಲಿ ಗುಳಿ ಬೀಳುತ್ತದೆ. ಬೆಕ್ಕಿನ ಕಣ್ಣು. ಚಂದ್ರಿ ಹಾಗಲ್ಲ. ಅವಳ ಮೈ ಕಪ್ಪು. ಹೊಳೆಯುವ ಕಣ್ಣುಗಳು. ನಕ್ಷತ್ರದ ಥರ ಮಿನುಗುತ್ತವೆ. ಲಲಿತೆಯನ್ನು ಕಳೆದುಕೊಂಡದಕ್ಕೆ ಯಾವ ಕಾರಣವಿದೆ ಎಂದೂ ಸತತ ಯೋಚನೆ ಮಾಡುತ್ತಾನೆ. "ಹೋಗಿ ಆಚೆಗೆ, ನನ್ನನ್ನು ನೀವು ಮುಟ್ಟಬೇಡಿ. ನನಗೆ